Doc-319
T.P-2

(1)

51st Year of Publication ★ SATYAVADI Daily, MYSORE 4

Reg No B G 155 ಶ್ರೀ 14-6-1966

ಪತ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6



Space available

For Permanent Advertisement

ಸ್ಥಾಪಕರು : ಶ್ರೀಮತಿ ಸಿಸ್ತ್ರೀವಾ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

# ಬದ್ರಿನಾಥ್, ಕೇದಾರ್‌ನಾಥ್ ಯಾತ್ರಿಕರ ಪೇಚಾಟ ಪರಿಸ್ಥಿತಿ

ಮೈಸೂರು ಅಪೇರಾ ಟಾಕೀಸ್ ಬಳಿ ಹೊಸದಾಗಿರುವ ತಮ್ಮ ಸ್ವಂತ ಭವ್ಯ ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಮಯವಾದ ಇಂದ್ರಜಾಲಾಟ ನಡೆಯುವ ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

## "ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಕ್ಷಿಪ್ರದಲ್ಲೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ಸೇರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತಿಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವುದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

### ದಾದಿಯರ ತರಬೇತು

ನವದೆಹಲಿ— 17 ರಿಂದ 29 ವಯಸ್ಸಿನ ಮಿತಿಯೊಳಗಿರುವ ಅವಿವಾಹಿತ, ವಿವಾಹ ವಿಚ್ಛೇದಿತ ಅಥವಾ ಪತಿಯಿಂದ ಪ್ರತ್ಯೇಕಗೊಂಡ ಮಹಿಳೆಯರಿಂದ ಹಾಗೂ ವಿಧವೆಯರಿಂದ ಮೂರು ವರ್ಷ ಕಾಲದ ದಾದಿಯರ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

## ಪರೀಕ್ಷಾ ಫಲಿತಾಂಶ

ಮೈಸೂರು— ಏಪ್ರಿಲ್ ತಿಂಗಳಲ್ಲಿ ನಡೆದ ವಿಶ್ವವಿದ್ಯಾನಿಲಯದ ಈ ಕೆಳಗೆ ಕಂಡ ಪರೀಕ್ಷೆಗಳ ಫಲಿತಾಂಶವು ತಾ ॥ 17 ರಂದು ಬೆಳಿಗ್ಗೆ 10 ಗಂಟೆಗೆ ಪ್ರಕಟಿಸಲಾಗುವುದು—

ಫಸ್ಟ್ ಬಿ ಎ, ಬಿಎಸ್ಸಿ, ಬಿ ಕಾಂ,; ಫೈನಲ್ ಬಿ ಕಾ ; ಬಿ ಇಡಿ ( ಹಳೇ ಮತ್ತು ಹೊಸ ಸ್ಕೀಂ ) :: ಬಿ ಇಡಿ ( ರೀಜನಲ್ ಕಾಲೇಜು) ; ಫಸ್ಟ್ ಸೆಕೆಂಡ್ ಎಲ್‌ಎಲ್ ಬಿ : ಫಸ್ಟ್ ಎಲ್ ಬಿ : ಪೆಡಿಸಿರ್, ಡೆಂಟಲ್ ಸರ್ಜರಿ ಪ್ರೀ ಪ್ರೊಫೆಷನಲ್ ; ಎಂ ಟೆಕ್ 1, 2 ಭಾಗ ; ಫಸ್ಟ್, ಫೈನಲ್ ಬಿ ಮ್ಯೂಸಿಕ್ ; ಬಿ ಲೈಬ್ ಸೈನ್ಸ್, ಪ್ರೀ ಯೂನಿವರ್ಸಿಟಿ ಮ್ಯೂಸಿಕ್, ಡಿಪ್ಲೊಮಾ ಡ್ಯಾನ್ಸ್ ಮ್ಯೂಸಿಕ್

★

### ವಿಮಾನ ಅಪಘಾತ

ಕಲ್ಕತ್ತಾ— ಬ್ಯಾಂಕಾಕಿನಿಂದ ಕರಾಚಿಗೆ ಹೋಗುತ್ತಿದ್ದ ಬೋಯಿಂಗ್ 707 ವಿಮಾನವು ಡಂಡಂ ವಿಮಾನ ನಿಲ್ದಾಣದ ಸ್ವಲ್ಪ ದೂರದಲ್ಲಿ ಅಗ್ನಿಗೆ ಆಹುತಿಯಾಗಿ ಬಿಕ್ಕಿ ಹಳ್ಳಿಯಲ್ಲಿ ಸುಟ್ಟು ಬಿದ್ದಿತು — 6 ಮಂದಿ ಸತ್ತರು — ಅದರಲ್ಲಿದ್ದವರಲ್ಲಿ ಕೆಲವರು ಹೊರಕ್ಕೆ ಹಾರಿದರು : ಕೆಲವರನ್ನು ಅಗ್ನಿಶಮನ ದಳದವರು ಈ ಜಿ ಗೆ ತಂದರು.

### ಅಗ್ನಿ ಆನಾಹುತ

ಮದರಾಸು— ನಗರದ ಉತ್ತರ ಭಾಗದಲ್ಲಿ ನಿಷ್ಕೆ ವ್ಯಾಸರಪಡಿಯಲ್ಲಿ ಒಂದು ಕಡೆ 100 ಜೋಪಡಗಳು ಬೆಂಕಿಯಿಂದ ಹಾಳಾದವು — ಮೊನ್ನೆ ವ್ಯಾಸರಪಡಿಯಲ್ಲಿ 700 ಜೋಪಡಿಗಳು ಸುಟ್ಟುಬೂದಿಯಾದವು.

★

### ನಾಗಾ ದೌರ್ಜನ್ಯರು

ಷಿಲಾಂಗ್— ಚೀನಾಕ್ಕೆ ಹೋಗುತ್ತಿದ್ದ ದೌರ್ಜನ್ಯ ನಾಗಾಗಳಿಗೂ ಬರ್ಮಾ ರಕ್ಷಣಾ ಪಡೆಯವರಿಗೂ ಆದ ಘರ್ಷಣೆಯಲ್ಲಿ 180 ನಾಗಾಗಳು ಮಡಿದರು — ಬರ್ಮಾ ರಕ್ಷಣಾ ಪಡೆಯಲ್ಲೂ ಸಾವು ನೋವುಗಳಾಗಿದೆ.

●

### ದುರಂತ

ಹಾಸನ— ಹಾಸನ-ಮಂಗಳೂರು ರಸ್ತೆಯಲ್ಲಿ ಸೈಕಲ್ಲಿನಲ್ಲಿ ಬರುತ್ತಿದ್ದ ಒಬ್ಬ ಸಮಾಜ ಕಲ್ಯಾಣ ಇನ್ಸ್‌ಪೆಕ್ಟರಿಗೆ ಹಿಂದಿನಿಂದ ಬರುತ್ತಿದ್ದ ಮಿಲಿಟರಿ ವ್ಯಾನ್ ಬಡಿದು ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿ ಸತ್ತನು.

★

### ಕೋಮುವಾರು

ನವದೆಹಲಿ— ಕೋಮುವಾರು ಚಟುವಟಿಕೆಯ ಸಂಸ್ಥೆಗಳ ಮೇಲೆ ನಿರ್ಬಂಧ ವಿಡುವ ವಿಷಯವನ್ನು ಶ್ರೀನಗರದಲ್ಲಿ ತಾ॥ 20-21 ರಲ್ಲಿ ನಡೆಯುವ ರಾಷ್ಟ್ರೀಯ ಭಾವೈಕ್ಯ ಸಮಿತಿಯಲ್ಲಿ ಪರ್ಯಾಲೋಚಿಸಲಾಗುವುದು.

●

### ಬೆಳ್ಳಿವಶ

ಡಾಮನ್ನಿನಲ್ಲಿ ಒಂದು ಕಡೆ ಪೋಲೀಸರು ರೂ. 4 ಲಕ್ಷ ಬೆಲೆಯ ಬೆಳ್ಳಿ ವಶಪಡಿಸಿಕೊಂಡರು. ಡಾಮನ್ನಿಗೆ ಬರುವ ಅಕ್ರಮ ವಿದೇಶೀ ಪದಾರ್ಥಗಳಿಗೆ ಬದಲಾಗಿ ಕೊಡಲು ತೀರಿಸಲಾಗಿತ್ತು.

### ಯಾತ್ರಿಕರ ವೇಚಾಟ

ಹರಿಹ್ವಾರ— ಹಿಮಾಲಯದ ದೇವಾಲಯಗಳ ದ ಬದ್ರೀನಾಥ್ ಮತ್ತು ಕೇದಾರನಾಥ್‌ಗೆ ಹೋಗುತ್ತಿರುವ 15000 ಯಾತ್ರಿಕರು, ಮೇಲ್ಛಾವಣಿಯಲ್ಲಿ ರಸ್ತೆ ಬಿಡಿದು ಸಾರಿಗೆ ಸೌಕರ್ಯವಿಲ್ಲದೆ ಹರಿದ್ವಾರ್, ರಿಷಿಕೇಶಗಳಲ್ಲಿ ವೇಚಾಟಕ್ಕೆ ಸಿಕ್ಕಿರುವರು.

★

### ಮೋಟಾರು, ಸ್ಕೂಟರು ಮಾರಿದ್ದಕ್ಕೆ ಜುಲ್ಮಾನೆ

ನವದೆಹಲಿ ಸಿ ಬಿ ಐ ತನಿಖೆಯಲ್ಲಿ ಗೊತ್ತುಪಡಿಸಿದ ವಾಯಿದೆ ಕಾಲವನ್ನು ಉಲ್ಲಂಘಿಸಿ, ತಮ್ಮ ಹೊಸ ಕಾರು ಮತ್ತಿತರ ಸ್ಕೂಟರುಗಳನ್ನು ಮಾರಿದವರಿಗೆ ಇಲ್ಲೀವರೆಗೆ ರೂ. 110000 ಜುಲ್ಮಾನೆ ವಿಧಿಸಲಾಗಿದೆ.

★

### ತಾರೆ ರಾಜಶ್ರೀ ಅಮೇರಿಕಾಕ್ಕೆ ಹೋದಳು

ಬೊಂಬಾಯಿ— ರೂ. 2 ಕೋಟಿ ವಹಿವಾಟಿನ ಮತ್ತು ರೂ. 40 ಲಕ್ಷ ವಿದೇಶೀ ವಿನಿಮಯ ಸಂಬಂಧಿಸಿದ 5 ಚಲಚ್ಚಿತ್ರಗಳಲ್ಲಿ ಪಾತ್ರವಹಿಸುತ್ತಿದ್ದ ತಾರೆ ರಾಜಶ್ರೀ ಮಂಗಳವಾರ ಅಮೇರಿಕಾಕ್ಕೆ ತನ್ನ ಗಂಡ ಸ್ವರೂಪ್ ಸಂಪತ್ ಮತ್ತು ಮಗರಿ ಛಾಪ್ ಮಣಿಸೊಡನೆ ಹೊರಟು ಹೋದಳು ಈ ವಿಷಯವನ್ನು ನಿರ್ಮಾಪಕರಿಗೆ ತಿಳಿಸಲಿಲ್ಲವೆಂತೆ. ಚಿತ್ರನಿರ್ಮಾಪಕರು ವಾರ್ತಾಮಂತ್ರಿಗಳಲ್ಲಿ ತಿಳಿಸಿದ್ದಾರೆ, ಮತ್ತು ಪ್ರದಾನಿಗಳಲ್ಲೂ ಮನವಿ ಮಾಡಲಿದ್ದಾರೆ— ರಾಜಶ್ರೀಯನ್ನು ಕರೆಸಿ ತಮ್ಮ ಚಿತ್ರಗಳನ್ನು ಮುಗಿಸಿಕೊಡಬೇಕೆಂದು ಅವರ ಕೋರಿಕೆ.

★

ಮಂಡ್ಯ— ಇಲ್ಲಿಯ ಕಾಕ್ಷಸಾಕಾರ ಸಕ್ಕರೆ ಕಾರ್ಖಾನೆಯು ಕಬ್ಬಿನವರದಿಂದ ಹಿಂಡುವ ಕಾರ್ಯವನ್ನು ನಿಲ್ಲಿಸುವುದೆಂದು ಘೋಷಣೆಯಾಗಿದೆ.

# ಭಕ್ತ ತುಳಸೀದಾಸ್

ಪ್ರಖ್ಯಾತ ಭಕ್ತ ತುಳಸೀದಾಸನು 400 ವರ್ಷಗಳ ಹಿಂದೆ ಜನ್ಮತಾಳಿದನು. ಅವನಿಗೆ 20 ವರ್ಷ ವಯಸ್ಸಾಗಿದ್ದಾಗ ಮದುವೆಯಾಯಿತು. ತನ್ನ ಹೆಂಡತಿಯ ಬಗ್ಗೆ ಅವನು ತುಂಬಾ ಮೋಹಪರವಶನಾಗಿದ್ದು, ಅವಳನ್ನು ಒಂದು ನಿಮಿಷವಾದರೂ ಬಿಟ್ಟಿರಲು ಸಹಿಸದವನಾಗಿದ್ದನು. ಅವಳು ಎಲ್ಲಿ ಹೋದರೂ ಅವಳನ್ನು ನೆರಳಿನಂತೆ ಅನುಸರಿಸುತ್ತಿದ್ದನು. ಕಲಿಯುಗದಲ್ಲಿ ಜನರು, ಇತರರನ್ನು ಕಡಮೆಯಾಗಿ ಕಾಣುವ ತಮ್ಮ ಉತ್ತಮತೆಯನ್ನು ಪ್ರದರ್ಶಿಸುವ ಹವ್ಯಾಸದಂತೆ, ಜನತೆ ಇವನ ವ್ಯಾಮೋಹಕ್ಕಾಗಿ, ಈ ಗಂಡಹೆಂಡರನ್ನು ಹಾಸ್ಯಮಾಡುತ್ತಾ, ಕೆಣಕುತ್ತಾ ಇದ್ದರು. ತುಳಸೀದಾಸನು ಇವನ್ನು ಲಕ್ಷಿಸುತ್ತಿರಲಿಲ್ಲ. ಆದರೆ ಮಾನಮರ್ಯಾದೆಯ ಜ್ಞಾನಹೊಂದಿದ್ದ ಅತನ ಪತ್ನಿಯು ಮನಸೊಂದಿಕೊಳ್ಳುತ್ತಾ, ಇವನ ಮೂಢ ವ್ಯಾಮೋಹವನ್ನು ಕಟುನಾಗಿ ಟೀಕಿಸಿ ಬುದ್ಧಿಹೇಳುತ್ತಿದ್ದಳು. ಆದರೆ ತುಳಸೀದಾಸನು ವಿವೇಕ ಮಾನಮರ್ಯಾದೆ ಕಡೆಗೆ ಕಿವಿಕೊಡುತ್ತಿರಲಿಲ್ಲ. [ ಸಶೇಷ ]

★

## ವಿವಾಹಮಹೋತ್ಸವ

ಬೆಂಗಳೂರು— ಚಿ ॥ ಎಂ. ಆರ್. ನರಸಿಂಹಸ್ವಾಮಿ ( ಶ್ರೀಮತಿ ವಿಶಾಲಾಕ್ಷಿ ರಾಮಸ್ವಾಮಿಯವರ ಪುತ್ರ ) ಮತ್ತು ಸೌ ॥ ಉಷಾ ( ಶ್ರೀಮತಿ ಮತ್ತು ಶ್ರೀ ಹೆಚ್. ಶಿವಸ್ವಾಮಿಯವರ ಪುತ್ರಿ ) ಇವರ ವಿವಾಹಮಹೋತ್ಸವವು ನಿನ್ನೆ ವೈಭವವಾಗಿ ನೆರವೇರಿತು.


# Cow Slaughter should be banned Immediately

# SHAKTI SUDHA

## A Superb Tonic



ಗೋರಕ್ಷಣೆ ಮತ್ತು ಪಾಲನೆಯಲ್ಲಿ ಆಸಕ್ತಿಗಳು ಹೆಚ್ಚಾಗಲಿ ಸಹಿಯಿ

## Protect the Cow

# ವುಡ್‌ಲಾಂಡ್ಸ್ ಜನವರಿಯ 7ನೇ ವಾರ

.... ಸುಜೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

# ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಚಲ ಸಹದೇವ್., ಐ. ಎಸ್. ಜೋಹರ್ [ವಿಶೇಷ ಪ್ರದರ್ಶನ]

ಆಪೇರ— 14—6—68 ರಿಂದ

ಪದ್ಮಿನಿ ಪಿಕ್ಚರ್ಸ್‌ರವರ

# ಕಿತ್ತೂರು ಚೆನ್ನಮ್ಮ

ಕನ್ನಡ

ನಿರ್ಮಾಪಕ, ನಿರ್ದೇಶನ : ಬಿ. ಆರ್. ಪಂತುಲು

# Help The Gorakshana

ಗೋರಕ್ಷಣಕ್ಕೆ ಹಣ ಸಹಾಯ ನೀಡಿ

— ಗೋರಕ್ಷಣೆ ವ್ಯವಸ್ಥಾಪಕರು ವಿನಂತಿ —

ಗೋರಕ್ಷಣಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಹಂದಾವಾಯಿದೆಳಲಿದಿಂವರು ಇವಂಜಿ ಹಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ॥ ಪಿ ಎಸ್ ನಾರಾಯಣ್, ಶ್ರೀ ಪಿ.ಎಸ್.ವಿಶ್ವನಾಥ್ ಜಯನಗರ ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅಸಂತನಂಜಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ, ಹೊಂಗನೂರ
ಗೋರಕ್ಷಣ ಆಫೀಸು ಪತ್ಯನಾದಿ ಪೈಸ್ ಚಾಮರಾಜಪುರಂ ಮೈಸೂರು 1

ವಿಳಾಸ — ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು


# Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is walknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmapracharn Nirata M S Krishna Rao ( Proprietor ) at the Satyavadi Press Chamarajapuram, Mysoe 4